ಕವಿತೆ

# ಉರಿಗೊಳ್ಳಿಯ ಬಳ್ಳಿ



ವೀರಣ್ಣ ಮಡಿವಾಳರ
ಕಲೆ: ರೂಪಶ್ರೀ ಕಲ್ಲಿಗನೂರು

ಈ ಹಸಿ ನೆಲದಾಗ
ಹುಸಿಹೋಗದ ಒಂದು ಸಸಿ ಹುಟ್ಟಿ
ಜಗಕೆಲ್ಲ ಬಿಸಿ ಮುಟ್ಟಿಸಿದ ಸುದ್ದಿ ಇದು
ಉಸಿರು ಬಿಗಿ ಹಿಡಿದು ಕೇಳಿ ನಿಸೂರ

ಒಂದು ಸಾರಿ
ಈ ಬೀಜ ಮೊಳೆತ ಹೊತ್ತಿಗೆ ಹೆತ್ತವರೂ ಹೇಸಿದ್ದರು
ಎಲ್ಯಾರ ಕೇಳಿರೇನು

ನಡೆಯುವ ದಾರಿ
ತುಂಬ ತಿವಿಯುವ ಹಲ್ಲಿನ ಕೋರಿ
ಬೆರೆಯಲೇ ಇಲ್ಲ ಯಾರನ್ನೂ
ತಪ್ಪು ಹೆಜ್ಜೆಗಳನೆಲ್ಲ ಒಪ್ಪು ಮಾಡುವರಿಲ್ಲ
ಬೆಪ್ಪು ದಾರಿಯೆ ಪಾಠ ತನಗೆ ತಾನೆ
ಯಾಕಾರ ಜಾರಿಬಿದ್ದೆ ತಪ್ಪಾಗಿ
ಈ ಮುಪ್ಪಾದ ನೆಲದೊಳಗ
ಹ್ಯಾಂಗ ಬಾಳೋದು ಓ ಶಿವನೆ
ತಪ್ಪಾಗಿ ಬಾಯಿಗೆ ಬಂದದ್ದೆ ರೂಢಿಯಾತು
ಆ ತಿರುಬೋಕಿ ಬೋಳೆ ಶಂಕರನಾಮಾ

ಇರುವ ಸುಡುಗಾಡಿನಲಿ ಇಲ್ಲದ ಹರನ
ಹುಡುಕಿತು ಹೊಸ ಜೀವ
ಇಲ್ಲವೆಂಬುದನು ತಿಳಿದು ತಿಳಿದೂ
ಯಾರೂ ಕಾಣದ್ದು
ತನ್ನ ಕಣ್ಣಿಗೆ ಕಂಡಿದೆಯೆಂದು ಅರಸಿ ಹೊರಟುದೆ
ಆತಲ್ಲ ಎಡವಟ್ಟು

ಹಾಕಿ ಪಟ್ಟಿನ ಮೇಲೆ ಪಟ್ಟು ಜುಟ್ಟಿಗೆ ಜೋಡಿಯ
ಕಟ್ಟಿ ಹಾಕ್ಯಾರ ಹಟ್ಟಿಯೊಳಗ
ಕಣ್ಣೆ ಕಳಚಿದ ಹೋರಿ ಹಾರಿ ಬಂದರೆ ಏರಿ
ಹೇಗಾದೀತು ಇದು ಇನ್ನು
ಎಳೆಯ ಹೆಣ್ಣುಗರು
ನೋಡೇತಿ ಹೋರಿಯ ಮಾರಿ ಮಾರಿ ಬಾರಿ ಬಾರಿ

ಅರಳುವ ಹೂವೊಂದು ಕನಸು ಕಟ್ಟುವ ಸಮಯ
ಯಾರೋ ಚುಚ್ಚಿದಂತಾತು ಕಣ್ಣು ಬಿಡುತಿರುವ
ಕುಸುಮದೆದೆಯ

